/465624/2023

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಮಾನ್ಯ ನ್ಯಾಯಾಲಯದ ತೀರ್ಪು ಹಾಗೂ ಸರ್ಕಾರದ ಆದೇಶದಂತೆ ಕಡ್ಡಾಯ ನಿರೀಕ್ಷಣಾ ಅವಧಿಯ ವೇತನ ಪಾವತಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**
1. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ಇವರ ಪತ್ರ ಸಂಖ್ಯೆ: ವಾರ್ಷಿಕ ಆಯವ್ಯಯ/01/2023-24 ದಿನಾಂಕ: 03-07-2023.
2. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: FD 96 BRS 2023, ದಿನಾಂಕ: 27-07-2023.

* * * * *

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ ರವರು,ಶ್ರೀಮತಿ ಹೆಚ್.ಬಿ.ಮಂಜುಳ, ನಿಲಯ ಮೇಲ್ವಿಚಾರಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಸ್ಥಳ ನಿಯುಕ್ತಿಗೊಂಡಿದ್ದು, ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ವರದಿ ಮಾಡಿಕೊಂಡ ದಿನಾಂಕ: 19-11-2022 ರಿಂದ 05-05-2023 ರವರೆಗಿನ ಅವಧಿಯನ್ನು ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಘೋಷಿಸಿ, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶದನುಸಾರ ಬಾಕಿ ವೇತನ ಒಟ್ಟು ರೂ.3,88,525/- ಗಳನ್ನು ಪಾವತಿಸಬೇಕಿರುತ್ತದೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕೇಂದ್ರ ಕಛೇರಿಯಲ್ಲಿ ಸ್ಥಳ ನಿರೀಕ್ಷಣೆಯಲ್ಲಿರುವ ಶ್ರೀ.ಶ್ರೀಹರಿ, ಹಿರಿಯ ಉಪ ನೋಂದಣಾಧಿಕಾರಿ ಇವರನ್ನು ಅವರ ಸ್ವಂತ ವೇತನ ಶ್ರೇಣಿಯ ಮೇಲೆ ಕೇಂದ್ರ ಕಛೇರಿಯಲ್ಲಿ ಖಾಲಿಯಿರುವ ಕೇಂದ್ರಸ್ಥಾನ ಸಹಾಯಕರು (ಆಡಳಿತ) ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದ್ದು, ದಿನಾಂಕ: 24-05-2022 ರಿಂದ 29-05-2023 ರವರೆಗಿನ ಅವಧಿಯನ್ನು ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಘೋಷಿಸಿ ಆದೇಶಿಸಲಾಗಿದೆ. ಸದರಿ ಅಧಿಕಾರಿಗೆ ರೂ.10,60,581/-ಗಳ ಬಾಕಿ ವೇತನ ಪಾವತಿಸಬೇಕಿರುತ್ತದೆ. ಅದರಂತೆ ಪ್ರಸ್ತಾಪಿತ ನೌಕರರಿಗೆ ಒಟ್ಟು ರೂ.14,49,106/-ಗಳ ಹೆಚ್ಚುವರಿ ಅನುದಾನವನ್ನು ಕೆಳಗಿನ ಲೆಕ್ಕಶೀರ್ಷಿಕೆಗಳಲ್ಲಿ ಬಿಡುಗಡೆ ಮಾಡಲು ಹಾಗೂ ಬಾಕಿ ವೇತನ ಸೆಳೆಯಲು ಅನುಮತಿ ನೀಡುವಂತೆ ಕೋರಿರುತ್ತಾರೆ.

| | |
|---|---|
| ಲೆಕ್ಕಶೀರ್ಷಿಕೆ : 2030-03-001-1-00-002 | ರೂ.6,72,394.00 |
| ಲೆಕ್ಕಶೀರ್ಷಿಕೆ : 2030-03-001-1-00-003 | ರೂ.2,40,194.00 |
| ಲೆಕ್ಕಶೀರ್ಷಿಕೆ : 2030-03-001-1-00-011 | ರೂ.3,00,696.00 |
| ಲೆಕ್ಕಶೀರ್ಷಿಕೆ : 2030-03-001-1-00-014 | ರೂ.2,34,222.00 |
| ಲೆಕ್ಕಶೀರ್ಷಿಕೆ : 2030-03-001-1-00-020 | ರೂ.1,600.00 |

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರಲ್ಲಿ 2023-24ನೇ ಸಾಲಿಗೆ ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವಂತೆ, ಶ್ರೀಮತಿ ಹೆಚ್.ಬಿ.ಮಂಜುಳ, ಪ್ರ.ದ.ಸ. ಹಾಗೂ ಶ್ರೀ ಶ್ರೀಹರಿ, ಹಿರಿಯ ಉಪ ನೋಂದಣಾಧಿಕಾರಿ ಇವರುಗಳನ್ನು ಮೇ-2022 ರಿಂದ ಜೂನ್-2023 ರವರೆಗೆ ಮತ್ತು ದಿನಾಂಕ: 19-11-2022 ರಿಂದ 05-05-2023 ರವರೆಗೆ ಅನುಕ್ರಮವಾಗಿ ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಘೋಷಿಸಿರುವ ಅವಧಿಗೆ ಬಾಕಿ ವೇತನವನ್ನು ಪಾವತಿಸಲು ಲೆಕ್ಕ ಶೀರ್ಷಿಕೆ: 2030-03-001-1-00-020-ವೈದ್ಯಕೀಯ ಭತ್ಯೆ ಅಡಿಯಲ್ಲಿ ರೂ..02 ಲಕ್ಷಗಳು, 002-ವೇತನ-ಅಧಿಕಾರಿಗಳು ಅಡಿಯಲ್ಲಿ ರೂ.6.72 ಲಕ್ಷಗಳು, 003-ವೇತನ - ಸಿಬ್ಬಂದಿ ಅಡಿಯಲ್ಲಿ ರೂ.2.40 ಲಕ್ಷಗಳು,

011-ತುಟ್ಟಿ ಭತ್ಯೆ ಅಡಿಯಲ್ಲಿ ರೂ.3.01 ಲಕ್ಷಗಳು, 014-ಇತರೆ ಭತ್ಯೆ ಅಡಿಯಲ್ಲಿ ರೂ.2.34 ಲಕ್ಷಗಳು ಒಟ್ಟು ರೂ.14.49 ಲಕ್ಷ (Rupees fourteen lakhs and forty-nine thousand only) ಗಳನ್ನು ಪುರ್ನವಿನಿಯೋಗದ ಮೂಲಕ ಒದಗಿಸಲು ಮಂಜೂರಾತಿ ನೀಡಿ ಆದೇಶಿಸಿರುತ್ತಾರೆ.

ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ/15/ಎಂಎನ್ಎಂಯು/2023**
**ಬೆಂಗಳೂರು, ದಿನಾಂಕ: 07-08-2023**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2023-24ನೇ ಸಾಲಿಗೆ ಸಂಬಂಧಿಸಿದಂತೆ, ಶ್ರೀಮತಿ ಹೆಚ್.ಬಿ.ಮಂಜುಳ, ಪ್ರ.ದ.ಸ. ಹಾಗೂ ಶ್ರೀ ಶ್ರೀಹರಿ, ಹಿರಿಯ ಉಪ ನೋಂದಣಾಧಿಕಾರಿ ಇವರುಗಳನ್ನು ಮೇ-2022 ರಿಂದ ಜೂನ್-2023 ರವರೆಗೆ ಮತ್ತು ದಿನಾಂಕ: 19-11-2022 ರಿಂದ 05-05-2023 ರವರೆಗೆ ಅನುಕ್ರಮವಾಗಿ ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಘೋಷಿಸಿರುವ ಅವಧಿಗೆ ಬಾಕಿ ವೇತನವನ್ನು ಪಾವತಿಸಲು ಲೆಕ್ಕ ಶೀರ್ಷಿಕೆ: 2030-03-001-1-00-020-ವೈದ್ಯಕೀಯ ಭತ್ಯೆ ಅಡಿಯಲ್ಲಿ ರೂ..02 ಲಕ್ಷಗಳು, 002-ವೇತನ-ಅಧಿಕಾರಿಗಳು ಅಡಿಯಲ್ಲಿ ರೂ.6.72 ಲಕ್ಷಗಳು, 003-ವೇತನ – ಸಿಬ್ಬಂದಿ ಅಡಿಯಲ್ಲಿ ರೂ.2.40 ಲಕ್ಷಗಳು, 011-ತುಟ್ಟಿ ಭತ್ಯೆ ಅಡಿಯಲ್ಲಿ ರೂ.3.01 ಲಕ್ಷಗಳು, 014-ಇತರೆ ಭತ್ಯೆ ಅಡಿಯಲ್ಲಿ ರೂ.2.34 ಲಕ್ಷಗಳು ಒಟ್ಟು ರೂ.14.49 ಲಕ್ಷ (ರೂಪಾಯಿ ಹದಿನಾಲ್ಕು ಲಕ್ಷದ ನಲವತ್ತೊಂಭತ್ತು ಸಾವಿರಗಳು ಮಾತ್ರ) ಗಳನ್ನು ಪುರ್ನವಿನಿಯೋಗದ ಮೂಲಕ ಬಿಡುಗಡೆ ಮಾಡಿ ಖಜಾನೆ-2ರ CCO Code ಸಂಖ್ಯೆ: 00105D ರಲ್ಲಿ ಅಪ್‌ಲೋಡ್ ಮಾಡಲು ಅನುಮತಿ ನೀಡಿ ಆದೇಶಿಸಿದೆ.

**ಷರತ್ತುಗಳು :**

1. ಈ ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನದ ಬಳಕೆಯಲ್ಲಿ ಯಾವುದೇ ರೀತಿಯ ಪುನರಾವರ್ತನೆ ಆಗಬಾರದು.
2. ಸದರಿ ಸರ್ಕಾರಿ ಆದೇಶವನ್ನು ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ತಮ್ಮ ಕಛೇರಿಯ ಅಧಿಕೃತ ಜಾಲತಾಣದಲ್ಲಿ ಪ್ರಚುರಪಡಿಸುವುದು.
3. ಪ್ರತಿ ತಿಂಗಳು ಸಾಧಿಸಿರುವ ಆರ್ಥಿಕ ಹಾಗೂ ಭೌತಿಕ ಪ್ರಗತಿಯ ಅಂಶವಾರು ವಿವರಗಳನ್ನು ಸಹ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ರವರು ತಮ್ಮ ಕಛೇರಿಯ ಅಧಿಕೃತ ಜಾಲತಾಣದಲ್ಲಿ ಪ್ರಚುರಪಡಿಸುವುದು.
4. ಈ ಮೇಲ್ಕಂಡ ಲೆಕ್ಕಶೀರ್ಷಿಕೆಗಳಲ್ಲಿ ಒದಗಿಸಲಾದ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆಗೊಳಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಬಳಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ಜಿ.ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

**ಇವರಿಗೆ :**

1. ಪ್ರಧಾನ ಮಹಾಲೇಖಪಾಲರು (ಎ&ಇ), ಅಂಚೆ ಪೆಟ್ಟಿಗೆ ಸಂಖ್ಯೆ: 5329, ಪಾರ್ಕ್‌ಹೌಸ್ ರಸ್ತೆ, ಕರ್ನಾಟಕ,

ಬೆಂಗಳೂರು-560001.

2. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು.
4. ಉಪ ನಿರ್ದೇಶಕರು, ಟಿಎನ್‌ಎಂಪಿ, 6ನೇ ಮಹಡಿ, ಕೆ.ಪಿ.ಸಿ.ಎಲ್ ಹಸಿರು ಕಟ್ಟಡ, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, 2ನೇ ಮಹಡಿ, ಬೆಂಗಳೂರು.

**ಪ್ರತಿಗಳು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ಭೂಮಿ ಮತ್ತು ಯುಪಿಓಆರ್) ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ), ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ನೋಂದಣಿ ಮತ್ತು ಮುದ್ರಾಂಕ) ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7&8), ವಿಧಾನ ಸೌಧ, ಬೆಂಗಳೂರು.
5. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು.